ಪಬ್ಲಿಕ್ ವರ್ಕ್ಸ್ ಇಲಾಖಾ.

ತುಮಕೂರು ಡಿವೀಜ್ಯ.

ಇಸ್ತಿಹಾರ್.

ತಾರೀಖು 30ನೇ ನವಂಬರ್ 1885.

ಗುಬ್ಬೀ ತಾಲ್ಲೂಕು 82ನೇ ರಿಜಿಸ್ಟರ್ ನಂಬರುಳ್ಳ ಕಡಬದ ಕೆರೆಯನ್ನು ದುರಸ್ತುಮಾಡಲಿಕ್ಕೆ ಇದರ ಬೆನೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತವೆ. ಈ ಬಗ್ಯೆ ಮಂಜೂರಾಗಿರುವ ವೊಬಲಗು 11,492; ಅದರೆ 7,494 ರೂಪಾಯಿಗಳ ಮಟ್ಟಿಗೆ ಈಗ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತವೆ, ಇದರಗೋಪವಾರೆ ಪಟ್ಟಿಯನ್ನು ಎಕ್ಜಿಕ್ಯೂಟಿವ್ ಇಂಜನಿಯರ್ ಆಫೀಸಿನಲ್ಲಿ ನೋಡಬಹುದು.

2. ಪ್ಲಾನುಗಳು, ಅಂದಾಜು ಪಟ್ಟಿಗಳು, ದರಗಳ ಷಡ್ಯೂಲ್ಪಟ್ಟಿ ಮತ್ತು ಷರತ್ತುಗಳು ಇವುಗಳನ್ನು ಎಕ್ಜಿಕ್ಯೂಟಿವ್ ಇಂಜನಿಯರ್ ಆಫಿಸಿನಲ್ಲಿ ಪ್ರತಿ ನಿತ್ಯವು ಪ್ರಾತಃಕಾಲ 11 ಘೆಂಟೆ ಲಾಗಾಯಿತು ಸಾಯಂಕಾಲ 4 ಘೆಂಟೆವರಿಗೂ ನೋಡಬಹುದು.

3. ಭರಿಸಿದ ದರಖಾಸ್ತು ನಮೂನೆಗಳಿಗಾಗಿ ಎಕ್ಜಿಕ್ಯೂಟಿವ್ ಇಂಜನಿಯರವರಿಗೆ ಬರೆದು ಕೊಂಡಲ್ಲಿ ಬಗರ್ ಕಿಮ್ಮತ್ತು ದೊರಿಯುವವು. ಈ ನಮೂನೆಗಳಲ್ಲಿ ಕಂಟ್ರಾಕ್ಟುದಾರನು ತಪೇಲು ನಮೂದಿಸಿ, ರುಜುನೀ ಲಕ್ಕೋಟೆಯಲ್ಲಿ ಹಾಕಿ ವೊಪರ್ಮುಡಿ ಸ್ಯ 1885ನೇ ಇಸವಿ ಡಿಸಂಬರ್ 20ನೇ ತಾರೀಖಿಗೆ ಮುಂಚಿತವಾಗಿ ಎಕ್ಜಿಕ್ಯೂಟಿವ್ ಇಂಜನಿಯರವರ ಬಳಿಗೆ ಕಳುಹಿಸತಕ್ಕದ್ದು.

4. ಯಾವದಾದರು ಒಂದು ದರಖಾಸ್ತಿನ ಅಬ್ಬೈರು ಮಂಜೂರಾತಿಯು ಸೂಪರ್ಟೆಂಡಿಂಗ್ ಇಂಜನಿಯರವರನ್ನು ಹೊಂದಿರುತ್ತೆಯಾಗಿ ಕಂ ದರಖಾಸ್ತನ್ನೇ ಆಗಲಿ ಯಾ ಯಾವ ದರಖಾಸ್ತನ್ನೇಆಗಲಿ ಮಂಜೂರ್ಮಾಡಲಿಕ್ಕೆ ಯಾ ಯಾವದಾದರು ಒಂದು ದರಖಾಸ್ತನ್ನು ತಿರಸ್ಕರಿಸಿದ್ದಕ್ಕಾಗಿ ಸಬಬ್ ನಮೂದಿಸಲಿಕ್ಕೆ ಸಹ ಸದರೀಯವರು ಬದ್ಧರಾಗಿರುವದಿಲ್ಲ.

5. ದರಖಾಸ್ತು ಮಂಜೂರಾದ 8 ದಿನಗಳ ಒಳಗಾಗಿ ದರಖಾಸ್ತುದಾರನು ನಗದಾಗಿ 300 ರೂಪಾಯಿಗಳ ತೇವಣಾತಿಯನ್ನು ಇಡತಕ್ಕದ್ದಲ್ಲದೆ ಮೂಮೂಲ್ ಮೇರಿಗೆ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡತಕ್ಕದ್ದು, ಹಾಗೆ ನಡಿಸಲು ತಪ್ಪಿದಲ್ಲಿ ಅಂಥಾವನ ದರಖಾಸ್ತು ರದ್ದಾದಂತೆ ಯೆಣಿಸಲ್ಪಡುವದು.

6. ಯಾವ ಕಂಟ್ರಾಕ್ಟುದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅಂಥಾವನ ಹೆಸರು ಕ್ರಮೇಣ ಎಕ್ಜಿಕ್ಯೂಟಿವ್ ಇಂಜನಿಯರವರ ಆಫೀಸಿನ ನೋಟಿಸ್ ಬೋರ್ಡಿನ ಮೇಲೆ ನಮೂದಿಸಲ್ಪಡುವದು. ಯಾವ ದರಖಾಸ್ತಿನ ಮಂಜೂರಾತಿ ಯೂ ತಿರಸ್ಕಾರ ವಿಷಯದಲ್ಲಿ ಬರದುಕೊಂಡಲ್ಲಿ ಜವಾಬ್ ದೊರಿಯಲಾರದು.

ಸಿ. ಟಿ. ದಳಾಲ್,
ಎಕ್ಜಿಕ್ಯೂಟಿವ್ ಇಂಜನಿಯರ್.

ಕಡೂರು ಡಿವೀಜ್ಯ.

ಇಸ್ತಿಹಾರ್.

ತಾರೀಖು 26ನೇ ನವಂಬರ್ 1885.

ತರೀಕೆರೆ ತಾಲ್ಲೂಕು 1ನೇ ರಿಜಿಸ್ಟರ್ ನಂಬರಿನ ದೊರ್ಲಾಳ್ಕೆರೆ ದುರಸ್ತು ಬಗ್ಯೆ ಇದರಿಂದ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತವೆ. ಈ ಬಗ್ಯೆ 10,733 ರೂಪಾಯಿಗಳ ಅಂದಾಜ ಮಂಜೂರಾಗಿರುತ್ತೆ.

2. ಪ್ಲಾನುಗಳು, ಅಂದಾಜ ಪಟ್ಟಿಗಳು, ದರಗಳ ಷೆಡ್ಯೂಲ್ ಪಟ್ಟಿ ಮತ್ತು ಷರತ್ತುಗಳು ಇವುಗಳನ್ನು ಎಕ್ಜಿಕ್ಯೂಟಿವ್ ಇಂಜಿನಿಯರ್ ಆಫಿಸಿನಲ್ಲಿ ಪ್ರತಿನಿತ್ಯವು ಪ್ರಾತಃಕಾಲ 11 ಘೆಂಟೆ ಲಾಗಾಯಿತು ಸಾಯಂಕಾಲ 4 ಘೆಂಟೆ ವರಿಗೂ ನೋಡಬಹುದು.

3. ಭರಿಸಿದ ದರಖಾಸ್ತು ನಮೂನೆಗಳಿಗಾಗಿ ಎಕ್ಜಿಕ್ಯೂಟಿವ್ ಇಂಜನಿಯರವರಿಗೆ ಬರದುಕೊಂಡಲ್ಲಿ ಬಗರ್ ಕಿಮ್ಮತ್ತು ದೊರಿಯುವವು. ಈ ನಮೂನೆಗಳಲ್ಲಿ ಕಂಟ್ರಾಕ್ಟುದಾರನು ತಪೇಲು ನಮೂದಿಸಿ ರುಜುನೀ ಲಕ್ಕೋಟೆಯಲ್ಲಿ ಹಾಕಿ ವೊಪರ್ಮಾಡಿ ಸ್ಯ 1885ನೇ ಇಸವಿ ಡಿಸಂಬರ್ 20ನೇ ತಾರೀಖಿಗೆ ಮುಂಚಿತವಾಗಿ ಎಕ್ಜಿಕ್ಯೂಟಿವ್ ಇಂಜನಿಯರವರ ಬಳಿಗೆ ಕಳುಹಿಸತಕ್ಕದ್ದು.

4. ಯಾವದಾದರು ಒಂದು ದರಖಾಸ್ತಿನ ಅಬ್ಬೈರು ಮಂಜೂರಾತಿಯು ಸೂಪರ್ಟೆಂಡಿಂಗ್ ಇಂಜನಿಯರವರನ್ನು ಹೊಂದಿರುತ್ತೆಯಾಗಿ ಕಂ ದರಖಾಸ್ತನ್ನೆ ಆಗಲಿ ಯಾ ಯಾವ ದರಖಾಸ್ತನ್ನೆ ಆಗಲಿ ಮಂಜೂರ್ಮಾಡಲಿಕ್ಕೆ ಯಾ ಯಾವದಾದರು ಒಂದು ದರಖಾಸ್ತನ್ನು ತಿರಸ್ಕರಿಸಿದ್ದಕ್ಕಾಗಿ ಸಬಬ್ ನಮೂದಿಸಲಿಕ್ಕೆ ಸಹ ಸದರೀಯವರು ಎದ್ದರಾಗಿರುವದಿಲ್ಲ.

5. ದರಖಾಸ್ತು ಮಂಜೂರಾದ 8 ದಿನಗಳ ಒಳಗಾಗಿ ದರಖಾಸ್ತುದಾರನು ನಗದಾಗಿ 500 ರೂಪಾಯಿಗಳ ಶೇವಸಾತಿಯನ್ನು ಇಡ ತಕ್ಕದ್ದಲ್ಲದೆ ಮಾಮೂಲ್ ವೇರಿಗೆ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡತಕ್ಕದ್ದು, ಹಾಗೆ ನಡಿಸಲು ತಪ್ಪಿದಲ್ಲಿ ಅಂಥಾವನ ದರಖಾಸ್ತು ರದ್ದಾದಂತೆ ಯೆಣಿಸಲ್ಪಡುವದು.

6. ಯಾವ ಕಂಟ್ರಾಕ್ಟುದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅಂಥಾವನ ಹೆಸರು ಕ್ರಮೇಣ ಎಕ್ಸಿಕ್ಯೂಟಿವ್ ಇಂಜನಿಯರವರ ಆಫೀಸಿನ ನೋಟಿಸ್ ಬೋರ್ಡಿನ ಮೇಲೆ ನಮೂದಿಸಲ್ಪಡುವದು. ಯಾವ ದರಖಾಸ್ತಿನ ಮಂಜೂರಾತಿ ಯಾ ತಿರಸ್ಕಾರದ ವಿಷಯದಲ್ಲಿ ಬರದುಕೊಂಡಲ್ಲಿ ಜವಾಬ್ ದೊರಿಯಲಾರದು.

ಡಿ. ಸೀತಾರಾಮಯ್ಯ,
ಅ॥ ಎ॥ ಇಂಜಿನಿಯರ್.

ಕಳವಾದ

ಪೂರಾ ಕರೆನ್ಸೀ ನೋಟ್.

ನಂಬರ್.	ಸರ್ಕಲ್	ಕ್ರಯ	ಹಕ್ಕುದಾರ್
B. 45—42407	ಮದ್ರಾಸ್	ರೂ. 1,000	ಮೈಸೂರು ಡಿಸ್ಟ್ರಿಕ್ಟು ತಿರುಮಕೂಡ್ಲು ನರಸೀಪುರದ ತಾಲ್ಲೂಕು ಗರ್ಗೇಶ್ವರಿಯಲ್ಲಿರುವ ವೆಂಕೋಬರಾವ—ಪತ್ತೇಮಾಡಿ ಕೊಟ್ಟವರಿಗೆ 50 ರೂಪಾಯಿ ಇನಾಂ ಕೊಡುವದಾಗಿ ಹೇಳುತ್ತಾರೆ.

ಗೈರ್ ವಿಲಾ

ಆದ ಬಲಭಾಗದ ಅರ್ಧ ತುಕಡಿ ಕರೆನ್ಸೀ ನೋಟ್.

ನಂಬರ್.	ಸರ್ಕಲ್.	ಕ್ರಯ.	ಹಕ್ಕುದಾರ್
B. 80—05959.	ಮದ್ರಾಸ್	ರೂ. 10	ಮೈಸೂರು ಹಳೇ ಅಗ್ರಹಾರದಲ್ಲಿರುವ ಅಬ್ದುಲ್ ಗುವಾಸ್ತೇ ಸುಬ್ಬರಾವ್.

ಪತ್ತೇಮಾಡಿ ಕೊಟ್ಟವರಿಗೆ ಎಂದು ರೂಪಾಯಿ ಇನಾಂ ಕೊಡುವದಾಗಿ ಹೇಳುತ್ತಾನೆ.

ಕಳವಾದ

ಪೂರಾ ಕರೆನ್ಸಿ ನೋಟುಗಳು.

ನಂಬರ್.	ಸರ್ಕಲ್.	ಕಿಮ್ಮತ್ತು	ಹಕ್ಕುದಾರ.
1883ನೇ ಇಸವಿಯ 27142	ಮದರಾಸ್	ರೂ. 100	ಹುಸೂರು ಆಂಜೇ ಕಚ್ಚೇರಿ
1882ನೇ ಇಸವಿಯ 01374	ಡಿಟೋ	ರೂ. 50	ದಫೇದಾರ ದಾಸಪ್ಪ.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಗಳು ತೆಗವುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಜೊಹಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ವೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌ ಔಷಧವುಳ್ಳ ಡಬ್ಬಿಗೆ ರೂ. 16—8—0; ಜೊಹಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಲ್ಲೇ ಕಂಡ ದರ ಪ್ರಕಾರ ನಗದೀಸೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ಸೇಟವ ಮಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತ್ತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು